5) ನೊಂದ ವ್ಯಕ್ತಿಯನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸೇರಿಸಿ ಪ್ರಥಮ ಚಿಕಿತ್ಸೆಯನ್ನು ಒದಗಿಸುವುದು ಆ ಮಹಿಳೆಯ ಬಟ್ಟೆಯನ್ನು ಸಂಗ್ರಹಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವುದು.

6) ಅಪರಾಧಿಯನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಬೇಕು ಮತ್ತು ಆ್ಯಸಿಡ್‌ನ್ನು ಪಡೆದ ಮೂಲವನ್ನು ತಿಳಿಯಬೇಕು.

7) ಅಪರಾಧಕ್ಕೆ ಕಾರಣವನ್ನು ಕಂಡುಹಿಡಿಯುವುದು.

8) ನೊಂದ ವ್ಯಕ್ತಿಯನ್ನು ಅನುಕಂಪದಿಂದ ನಡೆಸಿಕೊಳ್ಳಬೇಕು, ನೊಂದ ವ್ಯಕ್ತಿಗೆ ಅಥವಾ ಅದರ ಕುಟುಂಬದವರಿಗೆ ಉಂಟಾದ ಹಾನಿಯ ಕುರಿತು ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ತಿಳುವಳಿಕೆ ನೀಡಬೇಕು ಹಾಗೂ ಪರಿಹಾರ ಪಡೆಯಲು ಎಲ್ಲಾ ವಿಧವಾದ ಸಹಕಾರವನ್ನು ನೀಡತಕ್ಕದ್ದು.

9) ಸಾಮಾನ್ಯವಾಗಿ ಭಗ್ನ ಪ್ರೇಮ. ಏಕಮುಖಪ್ರೇಮ ಮುಂತಾದ ವಿಷಯಗಳಲ್ಲಿ ಬೆದರಿಕೆ ಹಾಕಿದ ಪ್ರಕರಣಗಳು ಠಾಣೆಗಳಲ್ಲಿ ವರದಿಯಾದಾಗ, ಈ ದೂರುಗಳನ್ನು ಠಾಣೆಗಳಲ್ಲಿ ಸಾಮಾನ್ಯ ದೂರುಗಳೆಂದು ಪರಿಗಣಿಸಿ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಿಲ್ಲ.

ಆದ್ದರಿಂದ ಇಂತಹ ದೂರುಗಳು ಬಂದಾಗ ಠಾಣಾ ಪ್ರಭಾರ ಅಧಿಕಾರಿಯು ಅಸಂಜ್ಞೇಯ ಪ್ರಕರಣವನ್ನು ದಾಖಲಿಸಿ, ಅವಶ್ಯಕತೆ ಕಂಡುಬಂದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದು, ಕಾನೂನಿನನ್ವಯ ಕ್ರಮ ಕೈಗೊಳ್ಳಬೇಕು. ಪೊಲೀಸರು ಪ್ರಾರಂಭಿಕ ಹಂತದಲ್ಲಿಯೇ ಸೂಕ್ತ ಕ್ರಮ ತೆಗೆದುಕೊಂಡರೆ ಇಂತಹ ಪ್ರಕರಣಗಳನ್ನು ತಡೆಯಬಹುದು ಮತ್ತು ಒಬ್ಬ ಮಹಿಳೆ ವಿರೂಪಗೊಂಡು, ಜೀವನ ಪರ್ಯಂತ ಯಾತನ ಅನುಭವಿಸುವುದರಿಂದ ಪಾರು ಮಾಡಬಹುದು.

1054(788) ಶ್ರೀ ಶಿವರಾಜ ಸಜ್ಜನರ್(ಹಾವೇರಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬಸಾಪುರ ಏತ ನೀರಾವರಿಯೋಜನೆ ಯಾವ ಹಂತದಲ್ಲಿದೆ;

ಆ) ಯಾವಾಗ ಪೂರ್ಣಗೊಳಿಸಲಾಗುವುದು;

ಇ) ಯಾವ ವರ್ಷದಲ್ಲಿ ಈ ಯೋಜನೆ ಪ್ರಾರಂಭವಾಗಿರುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಈ ಯೋಜನೆಯು ಎರಡು ಹಂತಗಳಲ್ಲಿ ಇರುತ್ತದೆ.

ಮೊದಲನೆ ಹಂತದ ಡೆಲಿವರಿ ಛೇಂಬರ್ ಹಾಗೂ ಡೈವರ್ಷನ್ ಗೋಡೆಗಳ ಕೆಲಸಗಳು ಮುಗಿದಿವೆ. ಜಾಕ್‌ವೆಲ್ ಕಂ ಪಂಪ್‌ಹೌಸ್ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಗೈಸಿಂಗ್‌ಮೇನ್ ಕಾಮಗಾರಿಯು ಪೈಪುಗಳ ಸರಬರಾಜು ಹಾಗೂ ಅಳವಡಿಕೆ ಕೆಲಸ ಪ್ರಗತಿಯಲ್ಲಿದೆ. ಸರಪಳಿ 0.56 ಕಿ.ಮೀ.ನಿಂದ 1.87 ಕಿ.ಮೀ.ಗಳ ನಡುವೆ ಬರುವ ಅಕ್ವಡಕ್ಟ್ ಕಾಮಗಾರಿ ಪ್ರಗತಿಯಲ್ಲಿದೆ.

ಮೊದಲನೇ ಹಾಗೂ ಎರಡನೇ ಹಂತದಲ್ಲಿ ಬರುವ ಮುಖ್ಯ ಕಾಲುವೆ, ವಿತರಣಾ ಕಾಲುವೆ ಇತ್ಯಾದಿಗಳ ಸರ್ವೇಕಾರ್ಯ, ಅಂದಾಜು ಪಟ್ಟಿ ಹಾಗೂ ವಿನ್ಯಾಸಗಳ ತಯಾರಿಕೆಯು ಪ್ರಗತಿಯಲ್ಲಿವೆ.

ಆ) ಬಿಜಾಪುರ ಏತ ನೀರಾವರಿ ಯೋಜನೆಯನ್ನು 2006ರ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ) ಬಿಜಾಪುರ ಏತ ನೀರಾವರಿ ಯೋಜನೆಯನ್ನು 1992–93ರ ಸಾಲಿನಲ್ಲಿ ಪ್ರಾರಂಭಿಸದಲಾಗಿದೆ.